1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 1948-2021

**ಸಿ.ಡಬ್ಲ್ಯು -**1, **ಪಿ.ಡಬ್ಲ್ಯು -**1

**ಸಾಕ್ಷಿದಾರರ ಹೆಸರು** : ಗುರುರಾಜ್ ಕೆ.ಆರ್.
ಗಂಡನ **ಹೆಸರು** : ರಾಮಕೃಷ್ಣ
**ವಯಸ್ಸು** : 42 ವರ್ಷ
**ಉದ್ಯೋಗ** : ರಾಜಸ್ವ ನಿರೀಕ್ಷಕರು, ಸಾಗರ
**ವಾಸ** : ಸಾಗರ.

**ಪ್ರಮಾಣೀಕರಿಸಿದ ದಿನಾಂಕ :**14.10.2025

**ಮುಖ್ಯ ವಿಚಾರಣೆ : ಸಸಅ ರಿಂದ**

1. ನಾನು 2019 ರಿಂದ 2023 ರವರೆಗೆ ಸಾಗರದ ಆವಿನಹಳ್ಳಿ ಹೋಬಳಿಯಲ್ಲಿ ರಾಜಸ್ವ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಸಮಯದಲ್ಲಿ ದಿಃ14.09.2020 ರಂದು ಆವಿನಹಳ್ಳಿಯ ಗಿಣಿವಾರ ಗ್ರಾಮದ ಸರ್ವೇ ಸಂಖ್ಯೆ 17 ರ ಸರ್ಕಾರಿ ಜಮೀನಿಗೆ ಹೋಗಿ ಅಕ್ರಮವಾಗಿ 1 ನೇ ಆರೋಪಿ ಮತ್ತು ಅವರ ಮಕ್ಕಳು ಕಟ್ಟುತ್ತಿದ್ದ ಗುಡಿಸಲನ್ನು ಕಟ್ಟದಂತೆ ಬುದ್ಧಿ ಹೇಳಿ ಬಂದಿರುತ್ತೇವೆ. ದಿಃ15.09.2020 ರಂದು ಆರೋಪಿತರು ಗುಡಿಸಲನ್ನು ಸರ್ವೇ ಸಂಖ್ಯೆ 17 ರಲ್ಲಿ ಕಟ್ಟುತ್ತಿದ್ದಾರೆಂದು ತಹಶೀಲ್ದಾರ್ ರವರಿಗೆ ದೂರು ಬಂದ ಕಾರಣ ಅವರು ನಮ್ಮನ್ನು ಅದನ್ನು ತಡೆಯುವಂತೆ ಆದೇಶಿಸಿ ಸರ್ವೇ ಸಂಖ್ಯೆ 17 ಕ್ಕೆ ಹೋಗುವಂತೆ ತಿಳಿಸಿರುತ್ತಾರೆ. ಚಾಸ 6, 7 ಮತ್ತು 9 ರವರು ಸರ್ವೇ ಸಂಖ್ಯೆ 17 ಕ್ಕೆ ಹೋದೆವು.

2. ಆರೋಪಿತರು ಅಕ್ರಮವಾಗಿ ಸರ್ವೇ ಸಂಖ್ಯೆ 17 ರಲ್ಲಿ ನಿರ್ಮಿಸುತ್ತಿದ್ದ ಗುಡಿಸಲನ್ನು ತೆರವುಗೊಳಿಸಿದೆವು. ಆ ಸಮಯಕ್ಕೆ 1 ನೇ ಆರೋಪಿ ಮತ್ತು ಅವರ ಮಕ್ಕಳು ಏರು ಧ್ವನಿಯಲ್ಲಿ ಮಾತನಾಡಿ ಅವಾಚ್ಯವಾಗಿ ನಿಂದಿಸಿ ನಮ್ಮನ್ನು ಅಡ್ಡಗಟ್ಟಿ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ನಂತರ ನಾವು ಆರೋಪಿತರು ಕರ್ತವ್ಯಕ್ಕೆ ಅಡ್ಡಿಪಡಿಸಿದ ಕಾರಣ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಾವು ತೆರವುಕಾರ್ಯಾಚರಣೆಗೆ ಹೋದಾಗ ಆದ ಘಟನೆಯನ್ನು ವೀಡಿಯೋ ಮಾಡಿ ಅದನ್ನು ಸಿ.ಡಿ.ಗೆ ಹಾಕಿ ಪೊಲೀಸರಿಗೆ ನೀಡಿರುತ್ತೇನೆ.

3. ನಾನು ದೂರನ್ನು ನೀಡಿದ 3-4 ದಿನಗಳ ನಂತರ ನಾನು ತೋರಿಸಿದ ಸ್ಥಳದಲ್ಲಿ ಪೊಲೀಸರು ಪಂಚನಾಮೆಯ ಕ್ರಮವನ್ನು ಜರುಗಿಸಿರುತ್ತಾರೆ. ಸಾಕ್ಷಿಯು ದೂರು ಮತ್ತು ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ 1 ಎಂದು,

ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 65(ಬಿ) ಪ್ರಮಾಣ ಪತ್ರ ಮತ್ತು ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, 65(ಬಿ) ಪ್ರಮಾಣ ಪತ್ರವನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸಿ.ಡಿ.ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ಸಾಕ್ಷಿಯು ಸಿ.ಡಿ. ಅಮಾನತ್ತು ಪಂಚನಾಮೆ ಮತ್ತು ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಿ.ಡಿ. ಅಮಾನತ್ತು ಪಂಚನಾಮೆಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 3 ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಿ.ಡಿ. ಇಲ್ಲದ ಕಾರಣ ಛಾಯಾಚಿತ್ರಗಳನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ಆ ದಿನ ಜಗಳ ಮಾಡಿದ ವ್ಯಕ್ತಿಗಳಲ್ಲಿ ಇಬ್ಬರು ನ್ಯಾಯಾಲಯದ ಮುಂದೆ ಆರೋಪಿತರ ಸ್ಥಾನದಲ್ಲಿರುತ್ತಾರೆ. ಇನ್ನಿಬ್ಬರು ಮಹಿಳೆಯರು ಇರುವುದಿಲ್ಲ, ಅವರನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ).

ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದಃ-

1. ಸರ್ವೇ ಸಂಖ್ಯೆ 17 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಆರೋಪಿತರು ಸರ್ವೇ ಸಂಖ್ಯೆ 17 ನ್ನು ಒತ್ತುವರಿ ಮಾಡಿ ಮನೆ ನಿರ್ಮಾಣ ಮಾಡುತ್ತಿರುವುದನ್ನು ನಿಲ್ಲಿಸಬೇಕೆಂದು ನಮ್ಮ ಕಚೇರಿಯಿಂದ ಯಾವುದೇ ರೀತಿಯ ಕಾನೂನುಬದ್ಧ ನೋಟೀಸನ್ನು ನೀಡಿರುವುದಿಲ್ಲ. ಸರ್ವೇ ಸಂಖ್ಯೆ 17 ರಲ್ಲಿ ಆರೋಪಿತರು ಶೆಡ್ ಅನ್ನು ನಿರ್ಮಿಸುವ ಹಂತದಲ್ಲಿದ್ದರು. ಆರೋಪಿತರಿಗೆ ಸರ್ವೇ ಸಂಖ್ಯೆ 17 ರಲ್ಲಿ ಜಾಗ ಮಂಜೂರಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೇಳಿರುತ್ತೇನೆ.

2. ಸರ್ವೇ ಸಂಖ್ಯೆ 17 ಗೋಮಾಳದ ಜಮೀನಾಗಿರುತ್ತದೆ. ಸರ್ವೇ ಸಂಖ್ಯೆ 17 ರಲ್ಲಿ 77 ಎಕರೆ ಜಮೀನು ಇರುತ್ತದೆ. ಸರ್ವೇ ಸಂಖ್ಯೆ 17 ರಲ್ಲಿ ಬಗರ್ ಹುಕುಂ ಸಾಗುವಳಿದಾರರು ಎಷ್ಟು, ಎಷ್ಟು ಜನ ಒತ್ತುವರಿ ಮಾಡಿದ್ದಾರೆಂದು ನನಗೆ ಮಾಹಿತಿ ಇರುವುದಿಲ್ಲ.

ಸರ್ವೇ ಸಂಖ್ಯೆ 17 ಕ್ಕೆ ಸಂಬಂಧಿಸಿದಂತೆ ಎಷ್ಟು ಬಗರ್ ಹುಕುಂ ಅರ್ಜಿ ಬಾಕಿ ಇವೆ ಎಂದು ನನಗೆ ಗೊತ್ತಿಲ್ಲ. ರೈತರು ತಮ್ಮ ಕೃಷಿ ಜಮೀನುಗಳಲ್ಲಿ ತಮ್ಮ ಕೃಷಿ ಉಪಕರಣಗಳನ್ನು ಇಟ್ಟುಕೊಳ್ಳಲು ಸಣ್ಣ ಶೆಡ್ ಅನ್ನು ನಿರ್ಮಾಣ ಮಾಡುತ್ತಾರೆ ಎಂದರೆ ಸರಿ. ನವೀನ್ ಗೌಡ ಈ ಪ್ರಕರಣವಾಗುವ ಸಮಯದಲ್ಲಿ ಸದರಿ ಗ್ರಾಮದ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ.

3. ಸರ್ವೇ ಸಂಖ್ಯೆ 17 ರಲ್ಲಿ ನವೀನ್ ಗೌಡ ಸುಮಾರು 15 ಎಕರೆಗೆ ಬೇಲಿಯನ್ನು ಹಾಕಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 15 ಎಕರೆಯೂ ತೋಟವಾಗಿದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಹಾಗೂ ನವೀನ್ ಗೌಡ ಚಾಸ 6 ರವರ ವಿರುದ್ಧ ಆರೋಪಿತರು ಜಾತಿ ನಿಂದನೆಯ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ನವೀನ್ ಗೌಡ ಕೆಳಜಾತಿಯ ಜನ ತಮ್ಮ ಜಮೀನಿನ ಪಕ್ಕದಲ್ಲಿ ಮನೆ ನಿರ್ಮಾಣ ಮಾಡಿದರೆ ಸರಿಯಾಗುವುದಿಲ್ಲ ಎಂದು ದೂರು ಅರ್ಜಿಯನ್ನು ನೀಡಿದ್ದರು ಎಂದರೆ ಸರಿಯಲ್ಲ.

4. ಒತ್ತುವರಿ ತೆರವುಗೊಳಿಸಬೇಕೆಂದು ಯಾವುದೇ ಗ್ರಾಮಸ್ಥರು ನಮ್ಮ ಕಚೇರಿಗೆ ಅರ್ಜಿಯನ್ನು ನೀಡಿರುವುದಿಲ್ಲ. ತಹಶೀಲ್ದಾರ್ ರವರು ಗುಡಿಸಲನ್ನು ತೆರವುಗೊಳಿಸುವಂತೆ ಮೌಖಿಕ ಆದೇಶವನ್ನು ಮಾಡಿದ್ದರು. ನಾವು ಸ್ಥಳಕ್ಕೆ ಹೋದಾಗ ಸರ್ವೇ ಸಂಖ್ಯೆ 17 ರಲ್ಲಿ ಗುಡಿಸಲಿನ ನಿರ್ಮಾಣವಾಗಿರಲಿಲ್ಲ. ಗುಡಿಸಲೇನಾದರೂ ನಿರ್ಮಾಣವಾಗಿದ್ದರೆ ತಹಶೀಲ್ದಾರ್ ರವರು ತೆರವುಗೊಳಿಸುವಂತೆ ಲಿಖಿತ ಆದೇಶವನ್ನು ಮಾಡುತ್ತಿದ್ದರು ಎಂದರೆ ಸರಿ. ಆ ರೀತಿಯ ಯಾವುದೇ ಆದೇಶ ಇರುವುದಿಲ್ಲ ಎಂದರೆ ಸರಿ.

5. ನವೀನ್ ಗೌಡ ನನಗೆ 2019 ರಿಂದಲೂ ಪರಿಚಯವಿರುತ್ತಾರೆ. ಆವಿನಹಳ್ಳಿ ವಿಭಾಗದಲ್ಲಿ ಒಟ್ಟು 3 ಜಾಗದಲ್ಲಿ ತೆರವು ಕಾರ್ಯಾಚರಣೆಯನ್ನು ಮಾಡಿರುತ್ತೇನೆ. ತೆರವು ಕಾರ್ಯಾಚರಣೆಯ ಸಮಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಬಳಸಿದ ಸಾಮಾಗ್ರಿಗಳನ್ನು ವಶಪಡಿಸಿಕೊಳ್ಳುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ 3 ಸೀಮೆಂಟ್ ಶೀಟ್, ಮರದ ಕಂಬಗಳನ್ನು ವಶಪಡಿಸಿಕೊಂಡಿರುತ್ತೇವೆ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಸಾಮಾಗ್ರಿಗಳನ್ನು ಆರೋಪಿತರಿಗೆ ನೀಡಿ ಬಂದಿರುತ್ತೇವೆ. ಸಾಮಾಗ್ರಿಗಳನ್ನು ಆರೋಪಿತರಿಗೆ ಹಿಂದಿರುಗಿಸಿರುವುದಕ್ಕೆ ಸಂಬಂಧಿಸಿದ ನಮೂದನೆ ಪಂಚನಾಮೆಯಲ್ಲಿ ಇರುವುದಿಲ್ಲ. ಆರೋಪಿತರು ಮಂಜೂರಾತಿಗಾಗಿ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ಕಚೇರಿಯ ದಾಖಲೆಗಳನ್ನು ಪರಿಶೀಲಿಸಿದ ನಂತರವೇ ಸ್ಥಳಕ್ಕೆ ಹೋಗಿರುತ್ತೇವೆ.

6. ತೆರವು ಕಾರ್ಯಾಚರಣೆ ಆದ ನಂತರ ಸರ್ವೇ ಸಂಖ್ಯೆ 17 ರಲ್ಲಿ ಆರೋಪಿತರಿಗೆ ಜಮೀನು ಮಂಜೂರಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಿ ಎಂದು ನೋಟೀಸನ್ನು ನೀಡಿರುವುದಿಲ್ಲ. ಸರ್ವೇ ಸಂಖ್ಯೆ 17 ರಲ್ಲಿ ಎಷ್ಟು ಜನ ಮನೆ ನಿರ್ಮಾಣ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಗ್ರಾಮ ಲೆಕ್ಕಾಧಿಕಾರಿಯ ಬಳಿ ಸರ್ವೇ ಸಂಖ್ಯೆ 17 ಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆದಿರುತ್ತೇನೆ. ಆರೋಪಿತರು ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಾರೋ ಇಲ್ಲವೋ ಎಂದು ಗ್ರಾಮ ಲೆಕ್ಕಾಧಿಕಾರಿಯಿಂದ ತಿಳಿದುಕೊಂಡಿರುವುದಿಲ್ಲ.

7. ಆರೋಪಿತರು ಮನೆ ಇಲ್ಲದವರು ಎಂದರೆ ಸರಿಯಲ್ಲ. ಆರೋಪಿತರ ಪೈಕಿ 1 ನೇ ಆರೋಪಿ ತೆರವು ಕಾರ್ಯಾಚರಣೆಯ ಸಮಯದಲ್ಲಿ ವಿಷವನ್ನು ಕುಡಿದಿರುತ್ತಾರೆ ಎಂದರೆ ಸಾಕ್ಷಿಯು ತೆರವು ಕಾರ್ಯಾಚರಣೆ ಆದ ನಂತರ ವಿಷವನ್ನು ಕುಡಿದಿರುತ್ತಾರೆ ಎಂದು ನುಡಿಯುತ್ತಾರೆ. ನವೀನ್ ಗೌಡ ರ ಮಾತನ್ನು ಕೇಳಿಕೊಂಡು ನಾನು ಆರೋಪಿತರಿಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನವೀನ್ ಗೌಡರ ಜಮೀನಿಗೆ ಆರೋಪಿತರು ಕೆಲಸಕ್ಕೆ ಹೋಗುವುದಿಲ್ಲವೆಂದು ನವೀನ್ ಗೌಡ ಆರೋಪಿತರ ವಿರುದ್ಧ ಸುಳ್ಳು ಅರ್ಜಿಗಳನ್ನು ನೀಡುತ್ತಿದ್ದ ಎಂದರೆ ಸರಿಯಲ್ಲ. ಗಿಣಿವಾರ ಗ್ರಾಮವು ಕೋಳೂರು ಗ್ರಾಮ ಪಂಚಾಯಿತಿಗೆ ಸೇರುತ್ತದೆ. ಆ ಸಮಯದಲ್ಲಿ ಗ್ರಾಮಾಭಿವೃದ್ಧಿ ಅಧಿಕಾರಿ ಸುರೇಶ್ ರವರು ಆಗಿದ್ದರು. ತೆರವು ಕಾರ್ಯಾಚರಣೆ ವಿಷಯವನ್ನು ಪಿಡಿಓ ರವರಿಗೆ ತಿಳಿಸಲಾಗಿತ್ತು. ಆರೋಪಿತರು 5*8 ಜಾಗದಲ್ಲಿ ಮನೆ ನಿರ್ಮಾಣ ಮಾಡುತ್ತಿದ್ದರು. ಗ್ರಾಮ ಪಂಚಾಯಿತಿಯಲ್ಲಿ ಆರೋಪಿತರು ಮಂಜೂರಾತಿಗಾಗಿ ಸಲ್ಲಿಸಿರುವ ಅರ್ಜಿ ಇದೆಯೋ ಇಲ್ಲವೋ ಎಂದು ನಾನು ಪರಿಶೀಲಿಸಿರುವುದಿಲ್ಲ.

8. ನವೀನ್ ಗೌಡ ಗಿಣಿವಾರ ಗ್ರಾಮಕ್ಕೆ ಅತೀ ಸಿರಿವಂತ ಎಂದರೆ ಸರಿ. ಆರೋಪಿತರು ಈ ಹಿಂದೆ ನವೀನ್ ಗೌಡರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಕೆಲಸಕ್ಕೆ ಹೋಗದೆ ಮನೆ ನಿರ್ಮಾಣ ಮಾಡುತ್ತಿದ್ದಾರೆಂದು ನನ್ನಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ಸಂಖ್ಯೆ 17 ರಲ್ಲಿ ಮನೆ ನಿರ್ಮಾಣವಾಗುತ್ತಿದೆ ಎಂದು ಅನಾಮಧೇಯ ಪತ್ರ ಬಂದಿರುತ್ತದೆ ಎಂದರೆ ಸರಿ. ಗ್ರಾಮದ ಜನರು ಸರ್ವೇ ಸಂಖ್ಯೆ 17 ರಲ್ಲಿ ಸಾಮಾಜಿಕ ವಲಯ ಅರಣ್ಯದಿಂದ ಗಿಡ ನೆಡುವುದನ್ನು ಮಾಡಿ ಎಂದು ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ನವೀನ್ ಗೌಡ ಯಾವುದೇ ಒತ್ತುವರಿ ಮಾಡದ ಕಾರಣ ನಾವು ತೆರವು ಮಾಡಿರುವುದಿಲ್ಲ.

ನಾನು ನವೀನ್ ಗೌಡರ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಅವರು 15 ಎಕರೆ ಒತ್ತುವರಿ ಮಾಡಿದ್ದರೂ ತೆರವುಗೊಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಒತ್ತುವರಿ ಮಾಡಿದ್ದಾರೆಂದು ಹೇಳುತ್ತಿರುವ ಸ್ಥಳದ ಅಳತೆ ಕಾರ್ಯವನ್ನು ಸರ್ವೇಯರ್ ಮೂಲಕ ಮಾಡಿಸಿರುವುದಿಲ್ಲ. ಆರೋಪಿತರು ನನ್ನ ವಿರುದ್ಧ ನವೀನ್ ಗೌಡ ಹಾಗೂ ಚಾಸ 6 ರವರ ವಿರುದ್ಧ ಜಾತಿ ನಿಂದನೆ ಪ್ರಕರಣವನ್ನು ದಾಖಲಿಸಿದರು ಎಂದು ಈ ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನವೀನ್ ಗೌಡ ನ ಪ್ರಭಾವಕ್ಕೆ ಒಳಗಾಗಿ ನಾನು ಗಿಣಿವಾರ ಗ್ರಾಮದ ಬಡಜನರಿಗೆ ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಸರ್ಕಾರಿ ಜಾಗದಲ್ಲಿ ಮನೆ ನಿರ್ಮಾಣವಾದರೆ ಪಂಚಾಯಿತಿಯವರು ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ನಮೂದಿಸುತ್ತಾರೆ ಎಂದರೆ ಸರಿ. ಆರೋಪಿತರು ಕೋಳೂರು ಗ್ರಾಮ ಪಂಚಾಯಿತಿಗೆ ಸರ್ವೇ ಸಂಖ್ಯೆ 17 ರಲ್ಲಿ ಮನೆ ಮಂಜೂರಾತಿ ಮಾಡಿ ಎಂದು ಅರ್ಜಿಯನ್ನು ನೀಡಿದ್ದರು ಎಂದರೆ ಸಾಕ್ಷಿಯು ಮನೆ ಮಂಜೂರು ಮಾಡಿ ಎಂದು ಅಷ್ಟೇ, ಸರ್ವೇ ಸಂಖ್ಯೆ ಬರೆದಿಲ್ಲ, ನಾನು ಆ ಅರ್ಜಿಯನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಅರ್ಜಿಯನ್ನು ನೋಡದ ಕಾರಣ ಯಾವ ಸರ್ವೇ ಸಂಖ್ಯೆ ಬರೆದಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ.

9. ಆರೋಪಿತರು ಮನೆ ಮಂಜೂರಾತಿಗಾಗಿ ಅರ್ಜಿಯನ್ನು ನೀಡಿ ಮನೆ ನಿರ್ಮಾಣ ಮಾಡುತ್ತಿದ್ದರು ಎಂದರೆ ಸರಿಯಲ್ಲ. 94 ಸಿ ಸಿ ಅರ್ಜಿಯು ಮನೆ ಕಟ್ಟಿಕೊಂಡವರು ಮಂಜೂರಾತಿಗಾಗಿ ಸಲ್ಲಿಸುವ ಅರ್ಜಿ ಎಂದರೆ ಸರಿ. ಸದರಿ ಅರ್ಜಿಯ ಉದ್ದೇಶ ಅನಧಿಕೃತವಾಗಿ ಕಟ್ಟಿದ ಮನೆಯನ್ನು ಅಧಿಕೃತಗೊಳಿಸಲು ಆಗಿರುತ್ತದೆ ಎಂದರೆ ಸರಿ. ನವೀನ್ ಗೌಡರ ಕುಮ್ಮಕ್ಕಿನಿಂದ ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸದೇ ಇದ್ದರೂ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಆರೋಪಿತರಿಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ವೀಡಿಯೋವನ್ನು ಸಿ.ಡಿ.ಗೆ ಹಾಕುವ ಪರಿಣಿತಿ ನನ್ನಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪರಿಣಿತಿಯ ಕುರಿತಾದ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ಕಾಲದ ತಂತ್ರಜ್ಞಾನದಲ್ಲಿ ಯಾರ ಮುಖವನ್ನಾದರೂ ವೀಡೀಯೋದಲ್ಲಿ ಬದಲಾಯಿಸಿ ಧ್ವನಿಯನ್ನು ಸಹ ಬದಲಾಯಿಸಬಹುದು ಎಂದರೆ ಸರಿ. ಸಿ.ಡಿ.ಯನ್ನು ನನಗೆ ಬೇಕಾದ ಹಾಗೆ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.